ಎಡವಟ್ಟು ಮಾಡಿಕೊಳ್ಳಲಿಲ್ಲ. ನೇಣು ಹಾಕ್ಕೊಂಡ್ಲಂತೆ. ಬೀ ಕೇರ್‌ಫುಲ್, ಇನ್ನೊಂದು ಸಾರಿ ಟ್ರೈ ಮಾಡೋವಾಗ ಹ್ಯಾಂಗ್ ಮಾಡ್ಕೊ. ಡೆಫಿನೆಟ್ಲಿ ಯು ವಿಲ್ ನಾಟ್ ಫೇಲ್.'' ಎಂದ ಋಗ್ವೇದಿಯ ಮಾತುಗಳನ್ನು ಕೇಳಿ ವೆಂಕಟೇಶ್ ಯಾದವ್ ಒಳಗೊಂಡು ಸುತ್ತಲಿದ್ದವರೆಲ್ಲಾ ಅವಾಕ್ಕಾಗಿದ್ದರು. ಅದ್ಯಾವುದನ್ನೂ ಲೆಕ್ಕಿಸದೆ ಋಗ್ವೇದಿ ಅಲ್ಲಿಂದ ಎದ್ದು ಹೊರ ಬಂದಿದ್ದರು. ಆ ಕ್ಷಣದಲ್ಲಿ ಥಟ್ಟನೆ ಪ್ರಜ್ಞಾ ಜೋಶಿ ನೆನಪಾಗಿದ್ದಳು. ಮೊನ್ನೆ ಸಿಕ್ಕಿದಾಗ ಅವಳ ಫೋನ್ ನಂಬರ್ ಫೀಡ್ ಮಾಡಿಕೊಂಡಿದ್ದರು. ನಂಬರ್ ಒತ್ತಿದ್ದರು. ``ಏನ್ ಪ್ರೊಫೆಸರ್ ಸಮಾಚಾರ. ಅಂತೂ ನೆನಪಾಗಿಬಿಟ್ಟೆ ನಾನು.'' ಪ್ರಜ್ಞಾ ಜೋಶಿ ನಕ್ಕಿದ್ದು ಗಾಳಿಯಲ್ಲಿ ತೇಲಿ ಬಂದು ಋಗ್ವೇದಿಯವರ ಕಿವಿ ತುಂಬಿಕೊಂಡಿತ್ತು. ``ಸೆಂಚುರಿಗೆ ಬರ್ತೀಯಾ, ಊಟ ಮಾಡೋಣ. ಇವೊತ್ತು ನಂದೆ ಬಿಲ್ಲು.'' ಎಂದಿದ್ದರು ಋಗ್ವೇದಿ. ``ಫೈನ್, ನೀನು ಕರೆಯೋದು ಹೆಚ್ಚೊ ನಾನು ಬರೋದು ಹೆಚ್ಚೊ. ಶಾರ್ಪ್ ಒಂದು ಗಂಟೆಗೆ ಅಲ್ಲಿರ್ತೀನಿ.'' ಎಂದಿದ್ದರು ಜೋಶಿ.

ಹೇಳಿದಂತೆ ಒಂದು ಗಂಟೆಗೆ ಸರಿಯಾಗಿ ಪ್ರಜ್ಞಾ ಜೋಶಿ ಬಂದಿದ್ದರು. ಟೀಶರ್ಟ್ ಮತ್ತು ಪ್ಯಾಂಟಿನಲ್ಲಿದ್ದ ಜೋಶಿ ತಲೆಯ ಕೂದಲಿಗೆ ಕಲರ್ ಹಾಕಿದ್ದರು. ಆದರೆ, ಜೋತಾಡುತ್ತಿದ್ದ ಕೈ ತೋಳು ಮತ್ತು ಕೆನ್ನೆಗೆ ಜೋಶಿಯ ವಯಸ್ಸನ್ನು ಮರೆಮಾಚಲು ಸಾಧ್ಯವಾಗಿರಲಿಲ್ಲ. ಜೋಶಿ ಮಾಮೂಲಿಯಾಗಿ ಎರಡು ಪೆಗ್ ಜಿನ್ ಹೇಳಿದ್ದರು. ಋಗ್ವೇದಿ ಅರ್ಧ ಬಾಟಲ್ ರೆಡ್ ವೈನ್ ಹೇಳಿದ್ದರು. ತಿನ್ನಲು ಪೆಪ್ಪರ್ ಚಿಕನ್, ಕೈಮ ಮಸಾಲ, ನೀರು ದೋಸೆ ಹೇಳಿದ್ದರು. ದೀರ್ಘವಾದ ಮೂರು ಗುಟುಕು ವೈನ್ ಕುಡಿದು ಋಗ್ವೇದಿ, ``ಪ್ರಜ್ಞಾ ನಿನ್ನ ಹತ್ತಿರ ಒಂದು ವಿಷಯ ಹೇಳೋಣ ಅಂತ. ಮೊನ್ನೆ ನೀನು ಮುಕುಂದ ರಾವ್ ಬಗ್ಗೆ ಹೇಳಿದೆಯಲ್ಲ ಅಂಥದ್ದೇ ಒಂದು ಪ್ರಾಬ್ಲಂನಲ್ಲಿ ಸಿಕ್ಕಿಹಾಕಿಕೊಂಡಿದ್ದೀನಿ.'' ಎಂದರು. ``ಏನೋ ಅಂಥ ಪ್ರಾಬ್ಲಂ. ನೀನು ಜೀನಿಯಸ್ ಅಲ್ವಾ. ಸಾಲ್ವ್ ಮಾಡೋ ಕೆಪಾಸಿಟಿ ನಿಂಗಿಲ್ವೆನೊ ಪ್ರೊಫೆಸರ್.'' ಎಂದು ಪೆಪ್ಪರ್ ಚಿಕನ್ನಿನ ತುಂಡನ್ನು ಬಾಯಿಗಿಟ್ಟುಕೊಂಡು ಮೆಲ್ಲಗೆ ನಮಿಲಿದ್ದಳು. ಋಗ್ವೇದಿ, ``ನಮ್ಮ ಮನೆ ಕೆಲಸದವಳಿಗೀಗ ನಲವತ್ತಾರು ವರ್ಷ – ಅವಳ ಆಧಾರ್ ಕಾರ್ಡಿನಲ್ಲಿ ರೆಕಾರ್ಡ್ ಆಗಿರುವ ಡೇಟ್ ಆಫ್ ಬರ್ತ್ ಪ್ರಕಾರ. ಈ ಐದು ವರ್ಷಗಳಿಂದ ದೈಹಿಕ ಸಂಬಂಧದಲ್ಲಿದ್ದೀವಿ. ನನ್ನ ಹೆಂಡತಿಯ ಜೊತೆ ಪಡೆದ ಸುಖಕ್ಕಿಂತ್ಲೂ ಹೆಚ್ಚಿನ ಸುಖಾನ ಅನುಭವಿಸಿಬಿಟ್ಟಿದ್ದೀನಿ. ನಾನೂ ಆಗಾಗ ಅವಳಿಗೆ ಮಸ್ತಾಗಿ ನೋಡ್ಕೊಂಡಿದ್ದೀನಿ ಅನ್ನು. ಮುಕುಂದ ರಾವ್ ಥರ ನಾನು ಅನ್ ಮ್ಯಾರೀಡ್ ಹುಡ್ಗೀನ ಪ್ರೆಗ್ನೆಂಟ್ ಮಾಡ್ಲಿಲ್ಲ. ನಮ್ಮ ಕೆಲಸದವಳಿಗೆ ಮಕ್ಕಳಾಗದಂತೆ ಆಪರೇಷನ್ ಕೂಡಾ ಆಗಿದೆ. ನಮ್ಮ ಸಂಬಂಧ ಅವಳ ಗಂಡನಿಗೂ ತಿಳಿದಿರಬಹುದು. ಆ ಬಗ್ಗೆ ಅಂಥ ಭಯ, ಆತಂಕಗಳೇನೂ ಇಲ್ಲ. ಆದರೆ, ಈ ಮೂರು ತಿಂಗಳಿಂದಲೂ ಅವಳು ಏನಾದರೂ ಮಾಡಿ ತನ್ನ ಗಂಡನನ್ನು ಕೊಲ್ಲಿಸುವಂತೆ ನನಗೆ ದುಂಬಾಲು ಬಿದ್ದು ಹಿಂಸೆ ಮಾಡುತ್ತಿದ್ದಾಳೆ. ಗಂಡ ದಿನವೂ ಕುಡಿದು ಬಂದು ಹಿಂಸೆ ನೀಡುತ್ತಾನಂತೆ. ಗಂಡನನ್ನು ಕೊಲ್ಲಿಸದಿದ್ದರೆ ತಾನೇ ನೇಣು ಹಾಕಿಕೊಂಡು ಸಾಯ್ತೀನಿ ಅಂತ ಹೆದರಿಸ್ತಿದಾಳೆ...'' ನಿಟ್ಟುಸಿರು ಬಿಟ್ಟು ಹೇಳಿದ್ದರು. ಪ್ರಜ್ಞಾ ಜೋಶಿ, ``ನೀನು ಏನೂ ಮಾಡ್ಬೇಡ. ಸುಮ್ಮನೆ ನಿನ್ನ ಮಕ್ಕಳ ಜೊತೆ ಅಮೆರಿಕಕ್ಕೆ ಹಾರಿಬಿಡು. ಎಲ್ಲಾ ಸಾಲ್ವ್ ಆಗುತ್ತೆ. ಇಲ್ಲಿದ್ದಾಗ ತಿಂಗಳಿಗೊಂದು ಸಾರಿ ಬೇಕಾದ್ರೆ ನಾನೇ ಬಂದು ಒಂದು ರಾತ್ರಿ ಪೂರ್ತಿ ಕಂಪನಿ ಕೊಡ್ತೀನಿ.'' ಎಂದು ಜೋರಾಗಿ ನಕ್ಕಾಗ ಆಕೆಯ ಹಲ್ಲುಗಳು ಮೋಹಕವಾಗಿ ಕಂಡಿದ್ದವು. ಸಿಗರೇಟೊಂದನ್ನು ಋಗ್ವೇದಿಯವರಿಗೆ ಕೊಟ್ಟು ತಾವೊಂದನ್ನು ಹಚ್ಚಿಕೊಂಡಿದ್ದರು. ಋಗ್ವೇದಿಯವರು ರೆಗ್ಯುಲರ್ ಸ್ಮೋಕಿಂಗ್ ಮಾಡುವವರಲ್ಲ. ಇವೊತ್ತಿನ ಸಿಗರೇಟು ತುಂಬಾ ಮಜಾ ಕೊಡುತ್ತಿತ್ತು. ``ಹುಷಾರು ಕಣೋ, ಸಿಗರೇಟಿನಲ್ಲಿ ಬಾಂಗ್ ಬೆರೆಸಿದ್ದೆ, ಎಷ್ಟು ಹಗುರ ಆಗ್ತೀಯ ನೋಡು ಇವೊತ್ತು. ಸ್ವರ್ಗಕ್ಕೆ ಹಾರಿದರೂ ಹಾರಬಹುದು.''